**ಸಾಕ್ಷಿಯನ್ನು ದಿನಾಂಕಃ21.07.2025ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ 4(ಎ) ಪ್ರತಿವಾದಿ ಪರ ಶ್ರೀ. ಜಿ ವಿ ವಕೀಲರಿಂದ:**

ದಾವಾ ಆಸ್ತಿ ಮೂಲತಃ ನನ್ನ ತಾತನಿಗೆ ಸೇರಿದ್ದು. ನನ್ನ ತಾತ ಮೋಟೆಗೌಡನಿಗೆ ಇಬ್ಬರು ಗಂಡು ಮಕ್ಕಳು ಮತ್ತು ಮೂರು ಜನ ಹೆಣ್ಣು ಮಕ್ಕಳು. ಅವರುಗಳೆಂದರೆ ಶ್ರೀನಿವಾಸ ಗೌಡ, ಬಿ ಎಂ ಸೀತಾರಾಮಯ್ಯ ಮತ್ತು ಹೆಣ್ಣು ಮಕ್ಕಳ ಹೆಸರು ಗೊತ್ತಿಲ್ಲ. ಐದು ಜನ ಮಕ್ಕಳಲ್ಲಿ ನನ್ನ ದೊಡ್ಡಪ್ಪ ಮತ್ತು ಒಬ್ಬರು ಹೆಣ್ಣು ಮಗಳು ತೀರಿಕೊಂಡಿರುತ್ತಾರೆ. ಆ ಐದು ಜನ ಮಕ್ಕಳಲ್ಲಿ ವಿಭಾಗ ಆಗಿತ್ತು ಎಂದು 2002-03ರಲ್ಲಿ ತಿಳಿದುಕೊಂಡಿರುತ್ತೇನೆ. ಸದರಿ ವಿಭಾಗ ಯಾವ ರೀತಿ ಆಗಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ.

2. ದಾವಾ ಆಸ್ತಿಗಳು ನನ್ನ ತಂದೆಯ ಭಾಗಾಂಶಕ್ಕೆ ಬಂದಿದ್ದ ಆಸ್ತಿಗಳಾಗಿದ್ದವು. ಆ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನನ್ನ ತಂದೆಗೆ ಒಟ್ಟು 16 ಎಕರೆ ಜಮೀನು ಬಂದಿತ್ತು. ನನ್ನ ತಂದೆಗೆ ಯಾವ ಯಾವ ಸರ್ವೆ ನಂಬರ್ ನಲ್ಲಿ ಜಮೀನು ಬಂದಿತ್ತು ಎಂದು ಅವುಗಳ ನಂಬರ್ ಮತ್ತು ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ನನ್ನ ದೊಡ್ಡಪ್ಪನಿಗೆ ಎಷ್ಟು ಆಸ್ತಿಗಳು ಹೋಗಿದ್ದವು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ಭಾಗಾಂಶದಲ್ಲಿ ಬಂದಿದ್ದ ಆಸ್ತಿಗಳ ಕುರಿತು ನನ್ನ ತಂದೆಗೆ ಎಂಆರ್ ಆದ ಬಗ್ಗೆ ಎಂಆರ್ ಆಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ.

3. ನಿಪಿ.4 ನ್ನು ಸಲ್ಲಿಸಿದಾಗ ನಾನು ಪ್ರಾಪ್ತನಾಗಿದ್ದೆ. 2006 ರ ನಂತರ ದಾವಾ ಆಸ್ತಿಗಳು ಉಳಿದಿವೆ ಎಂದು ನನಗೆ ತಿಳಿಯಿತು. 2006 ರಲ್ಲಿ ದಾವಾ ಆಸ್ತಿಗಳು ನನ್ನ ತಂದೆಯ ಹೆಸರಿಗೆ ಬರುತ್ತಿದ್ದವು. ಆ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿ, ಸದರಿ ದಾಖಲೆಗಳನ್ನು ನಾನು

ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ಹಾಜರುಪಡಿಸಲು ನಾನು ಪ್ರಯತ್ನ ಮಾಡುತ್ತೇನೆ. ಈಗ ದಾವೇಯಲ್ಲಿ ಮೂರು ಆಸ್ತಿಗಳು ಇದ್ದು, ಅವುಗಳಲ್ಲಿ ಹೆಸರು 4ನೇ ಪ್ರತಿವಾದಿಯ ಹೆಸರಿಗೆ ಬರುತ್ತಿವೆ. 4ನೇ ಪ್ರತಿವಾದಿಯ ಹೆಸರಿಗೆ ಹೇಗೆ ಖಾತೆಯಾಗಿದೆ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ. 4ನೇ ಪ್ರತಿವಾದಿಗೆ 4-5 ವರ್ಷಗಳಿಂದ ಖಾತೆ ಬರುತ್ತಿದೆ.

4. ನಿಪಿ.9ನ್ನು ನಾನು ಹಾಜರುಪಡಿಸಿದ್ದೇನೆ ಎಂದರೆ ಇರಬಹುದು, ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಿಪಿ.9ರಂತೆ 2000ನೇ ಇಸವಿಯಲ್ಲಿ 4ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದೆ ಎಂದು ನಮೂದಾಗಿದೆ ಎಂದರೆ ಸರಿ. ಸದರಿ ಖಾತೆಯನ್ನು ನಾವು ಎಲ್ಲಿಯೂ ಪ್ರಶ್ನಿಸಿಲ್ಲ. ದಾವಾ ಆಸ್ತಿಗಳು ನಿಪಿ.4ರ ದಾವೇಯಲ್ಲಿ ಸೇರಿರಲಿಲ್ಲ ಎಂದು 2006ರಲ್ಲಿ ಗೊತ್ತಾಯಿತು. ದಾವಾ ಆಸ್ತಿಗಳು 2006ರಲ್ಲಿ ಜಂಟ ಕುಟುಂಬದ ಹೆಸರಿನಲ್ಲಿ ಬರುತ್ತಿದ್ದವು. 2006ರಲ್ಲಿ ನನ್ನ ದೊಡ್ಡಪ್ಪ ಜೀವಂತ ಇದ್ದರು. ನನ್ನ ದೊಡ್ಡಪ್ಪ 2008-09ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ದೊಡ್ಡಪ್ಪನವರಿಗೆ ಮೂರು ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳಿರುತ್ತಾಳೆ. ದಾವಾ ಆಸ್ತಿಗಳು ನನ್ನ ದೊಡ್ಡಪ್ಪನ ಭಾಗಾಂಶದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ತಂದೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ದಾವಾ ಆಸ್ತಿಗಳಲ್ಲಿ ಭಾಗಾಂಶ ಬರದೇ ಇದ್ದ ಕಾರಣ, ನಿಪಿ.4ರ ದಾವೇಯಲ್ಲಿ ಅವುಗಳನ್ನು ಸೇರಿಸರಿರಲಿಲ್ಲ ಎಂದರೆ ಸರಿಯಲ್ಲ. 2006ರಲ್ಲಿ ನನ್ನ ದೊಡ್ಡಪ್ಪ ಮತ್ತು ನನ್ನ ತಂದೆಯ ಹೆಸರಿನಲ್ಲಿ ಜಂಟಿ ಖಾತೆ ಬರುತ್ತಿದ್ದಿದ್ದು, ನನ್ನ ದೊಡ್ಡಪ್ಪ ನನ್ನು ಈ ದಾವೇಯಲ್ಲಿ ಸೇರಿಸಿಲ್ಲ.

5. ನಿಪಿ.6, 1998-1999ರಲ್ಲಿ 4ನೇ ಪ್ರತಿವಾದಿಯ ಹೆಸರಿನಲ್ಲಿತ್ತು. ನಿಪಿ.7, 1998-1999ರಲ್ಲಿ 4ನೇ ಪ್ರತಿವಾದಿಯ ಹೆಸರಿನಲ್ಲಿತ್ತು. ನಿಪಿ.8, 1998-1999ರಲ್ಲಿ 4ನೇ ಪ್ರತಿವಾದಿಯ ಹೆಸರಿನಲ್ಲಿತ್ತು.

ನನಗೆ ದಾವಾ ಆಸ್ತಿಗಳ ಬಗ್ಗೆ ಯಾವುದೇ ಅರಿವು ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ವಿಭಾಗ ಮಾಡಿಕೊಂಡಾಗ, ನಿಪಿ.4ರ ದಾವಾ ಆಸ್ತಿಗಳು ಮಾತ್ರ ನನ್ನ ತಂದೆಯ ಭಾಗಾಂಶಕ್ಕೆ ಮಾತ್ರ ಬಂದಿದ್ದು ಎಂದರೆ ಸರಿಯಲ್ಲ. ನನ್ನ ತಂದೆಗೆ ಪಾರಿಖತ್ ನಂತೆ ಬಂದಿದ್ದ ಎಲ್ಲಾ ಆಸ್ತಿಗಳಿಗೆ ಮಾತ್ರ ದಾವೇ ಹೂಡಿದ್ದವು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.